— ! ಸಂಯುಕ್ತ ಕರ್ನಾಟಕ; —
ನವೆಂಬರ್, ೨೯, ೨೦15
ಪುಟ ಸಂಖ್ಯೆ-05

ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯ ಬಲ್ಲಿರಾ...?

# ಸಹಿಷ್ಣುತೆ ಮಂತ್ರ ಹೇಳಿದ ಕನಕದಾಸರ ಎಲ್ಲೆಡೆ ಸ್ಮರಣೆ

ಬೆಳಗಾವಿ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಜ್ಞಾನ ಸಂಗಮದಲ್ಲಿ ಭಕ್ತ ಕನಕದಾಸರ ಜಯಂತಿಯನ್ನು ಆಚರಿಸಲಾಯಿತು.

ವಿಶ್ವವಿದ್ಯಾಲಯದ ಕಾರ್ಯಕಾರಿ ಮಂಡಳಿ ಸದಸ್ಯರಾದ ಡಾ. ಡಿ. ಹೆಚ್. ರಾವ್ ಹಾಗೂ ಸ್ನಾತಕೋತ್ತರ ವಿಭಾಗದ ಸಂಯೋಜಕರಾದ ಡಾ. ಎಸ್. ಬಿ ದಂಡಗಿ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಡಾ. ಡಿ. ಹೆಚ್. ರಾವ್ ಅವರು ಮಾತನಾಡಿ ಭಕ್ತ ಕನಕದಾಸರು ಸಮಾಜದಲ್ಲಿ ಮಾನವ ಜನಾಂಗದ ಕಲ್ಯಾಣಕ್ಕಾಗಿ ಅಧ್ಯಾತ್ಮಿಕ ವಿಚಾರಗಳನ್ನು ಅರ್ಥಪೂರ್ಣವಾಗಿ ಭೋದಿಸಿದ ಮಾಹಾನ್ ಪುರುಷ. ಸಾಮಾನ್ಯ ಜನರಿಗೆ ಅರ್ಥವಾಗುವ ರೀತಿಯಲ್ಲಿ ದಾಸ ಸಾಹಿತ್ಯವನ್ನು ರಚಿಸಿ ಜನ ಜಾಗ್ರತಿ ಮೂಡಿಸುವಲ್ಲಿ ಅವರ ಪಾತ್ರ ಪ್ರಮುಖವಾದದ್ದು ಡಾ. ಎಸ್. ಬಿ. ದಂಡಗಿ ಅವರು ಮಾತನಾಡಿ ಕನಕದಾಸರು ಭೋದಿಸಿದ ತತ್ವಗಳು ಮಾನವನ ಜೀನವಕ್ಕೆ ಸ್ಪೂರ್ತಿಯಾಗಿದ್ದು, ಸಮಾಜದಲ್ಲಿ ಪ್ರತಿಯೊಬ್ಬರು ಭಕ್ತ ಕನಕದಾಸರ ತತ್ವಗಳನ್ನು ಪಾಲಿಸಬೇಕು ಹಾಗೂ ಗೌವರವಿಸಬೇಕು ಎಂದು ಹೇಳಿದರು.

ಸ್ಥಾನಿಕ ಅಭಿಯಂತರರಾದ ಡಾ. ಶಾಂತಪ್ಪ, ಸ್ನಾತಕೋತ್ತರ ವಿಭಾಗದ ಎಲ್ಲ ಪ್ರಾಧ್ಯಾಪಕರು, ವಿಶ್ವವಿದ್ಯಾಲಯದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಸಮಾರಂಭದಲ್ಲಿದ್ದರು.



ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಜ್ಞಾನ ಸಂಗಮದಲ್ಲಿ ಭಕ್ತ ಕನಕದಾಸರ ಜಯಂತಿಯನ್ನು ಆಚರಿಸಲಾಯಿತು. SK-5

ಗ್ರಂಥಾಲಯ ಬೆಳಗಾವಿ

— ! ಪ್ರಜಾವಾಣಿ; —
೨9-ನವೆಂಬರ್-೨015, ರವಿವಾರ
ಪುಟ ಸಂಖ್ಯೆ. 3B

# ಕನಕದಾಸರಿಗೆ ಪೂಜೆ

ಪ್ರಜಾವಾಣಿ ವಾರ್ತೆ - 3B

ಬೆಳಗಾವಿ: ಭಕ್ತಶ್ರೇಷ್ಠ ಕನಕದಾಸರು ಮಾನವ ಜನಾಂಗದ ಕಲ್ಯಾಣಕ್ಕಾಗಿ ಅಧ್ಯಾತ್ಮಿಕ ವಿಚಾರಗಳನ್ನು ಅರ್ಥಪೂರ್ಣವಾಗಿ ಬೋಧಿಸಿದ ಮಹಾನ್ ಪುರುಷರಾಗಿದ್ದಾರೆ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಸದಸ್ಯ ಡಾ. ಡಿ.ಎಚ್. ರಾವ್ ಅಭಿಪ್ರಾಯಪಟ್ಟರು.

ವಿಶ್ವವಿದ್ಯಾಲಯದ ಜ್ಞಾನ ಸಂಗಮ ಸಭಾಭವನದಲ್ಲಿ ಶನಿವಾರ ನಡೆದ ಭಕ್ತ ಕನಕದಾಸರ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಅವರು ಕನಕರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಸಾಮಾನ್ಯ ಜನರಿಗೆ ಅರ್ಥವಾಗುವ ರೀತಿಯಲ್ಲಿ ದಾಸ ಸಾಹಿತ್ಯವನ್ನು ರಚಿಸಿ, ಜನ ಜಾಗೃತಿ ಮೂಡಿಸಿರುವ ಕನಕದಾಸರ ಸೇವೆ ಅನನ್ಯ ಎಂದು ಹೇಳಿದರು.

ಸ್ನಾತಕೋತ್ತರ ವಿಭಾಗದ ಸಂಯೋಜಕ ಡಾ.ಎಸ್.ಬಿ. ದಂಡಗಿ ಉಪನ್ಯಾಸ ನೀಡಿದರು. ಡಾ. ಶಾಂತಪ್ಪ ಉಪಸ್ಥಿತರಿದ್ದರು.



ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಶನಿವಾರ ಕನಕದಾಸ ಜಯಂತಿ ಆಚರಣೆ ಸಮಾರಂಭದಲ್ಲಿ ಕನಕದಾಸರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಆಡಳಿತ ಮಂಡಳಿ ಸದಸ್ಯ ಡಾ. ಡಿ.ಎಚ್. ರಾವ್ ಇದ್ದಾರೆ

— ! The New Indian Express ! —
Sunday - 29 - Nov - 2015 Page No - 03



A portrait of Kanakadasa being garlanded at VTU in Belagavi on Saturday

**Danawant Hajagol said Kanakadasa tried to build a society on the basis of humanity and his poems are still relevant**

TNIE 3

Visvesvaraya Technological University also celebrated Kanaka jayanti.

Its Executive Council member D H Rao and Co-ordinator of the Centre for PG Studies S B Dandagi addressed the students.

Rao said Kanakadas actively took part in Dasa sahitya movement. He used common language in his poetry which was easy to understand. He successfully blended the spoken language with classical Carnatic music, he said. Shantappa, Resident Engineer of the university and staff participated in the event.

— ! ಲಿಂಗಾಯತ ! —
ಭಾನುವಾರ, 29-ನವೆಂಬರ್-2015
ಪುಟ ಸಂಖ್ಯೆ-5A

# ಕನಕದಾಸರ ತತ್ವಗಳು ಬದುಕಿಗೆ ಸ್ಫೂರ್ತಿ

ಬೆಳಗಾವಿ: ಸ್ಥಳೀಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಭಕ್ತ ಕನಕದಾಸರ ಜಯಂತಿ ಆಚರಿಸಲಾಯಿತು. ವಿಶ್ವವಿದ್ಯಾಲಯದ ಕಾರ್ಯಕಾರಿ ಮಂಡಳಿ ಸದಸ್ಯ ಡಾ.ಡಿ.ಎಚ್.ರಾವ್ ಮಾತನಾಡಿ, ಕನಕದಾಸರು ಮಾನವ ಜನಾಂಗದ ಕಲ್ಯಾಣಕ್ಕಾಗಿ ಆಧ್ಯಾತ್ಮಿಕ ವಿಚಾರಗಳನ್ನು ಅರ್ಥಪೂರ್ಣವಾಗಿ ಬೋಧಿಸಿದ ಮಹಾನ್ ಪುರುಷ. ಸಾಮಾನ್ಯ ಜನರಿಗೆ ಅರ್ಥವಾಗುವ ರೀತಿಯಲ್ಲಿ ದಾಸ ಸಾಹಿತ್ಯ ರಚಿಸಿ ಜನಜಾಗೃತಿ ಮೂಡಿಸುವಲ್ಲಿ ಅವರ ಪಾತ್ರ ಪ್ರಮುಖ ಎಂದರು. ಸ್ನಾತಕೋತ್ತರ ವಿಭಾಗದ ಸಂಯೋಜಕ ಡಾ.ಎಸ್.ಬಿ. ದಂಡಗಿ ಮಾತನಾಡಿ, ಕನಕದಾಸರ ತತ್ವಗಳು ಮಾನವನ ಜೀವನಕ್ಕೆ ಸ್ಫೂರ್ತಿಯಾಗಿವೆ. ಪ್ರತಿಯೊಬ್ಬರೂ ಕನಕದಾಸರ ತತ್ವಗಳನ್ನು ಪಾಲಿಸಬೇಕು ಎಂದು ಕರೆ ನೀಡಿದರು. ಸ್ಥಾನಿಕ ಅಭಿಯಂತರ ಡಾ.ಶಾಂತಪ್ಪ, ಪ್ರಾಧ್ಯಾಪಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಕನಕದಾಸರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುತ್ತಿರುವ ಗಣ್ಯರು.